‘ಅಕ್ಕಾ ನಾನು ಪಂಚಾಯಿತಿ ಬಿಲ್ ಕಲೆಕ್ಟರ್ ಬಸವ’ ಅಂದ. ಸರಿಯಾಗಿ ನಿಂತುಕೊಳ್ಳುವುದಕ್ಕೆ ಬರದಷ್ಟು ಕುಡಿದಿದ್ದ. ಅವನ ಬಾಯಿಂದ ಬರುವ ಗಬ್ಬು ನಾತಕ್ಕೆ ಶಾರದಮ್ಮಗೆ ವಾಂತಿ ಬಂದಂಗಾಗಿ ಮೂಗು ಮುಚ್ಚಿಕೊಂಡಳು. ‘ಏನ್ ಬಸವ ಇಷ್ಟೊತ್ತಲ್ಲಿ ಬಂದಿ?’ ಗಟ್ಟಿದ್ವನಿಲಿ ಅಂದಳು. ‘ಶಾರದಮ್ಮಕ್ಕ ಒಂದು ಮಾತು ಕೇಳೊದಿತ್ತು’ ಅಂತ ಅಲ್ಲಿಗೆ ತಡೆದ. ಶಾರದಮ್ಮಗೆ ಜೀವ ಜಲ್ ಅಂತು. ಕರೆಂಟ್ ಇಲ್ಲ. ಫುಲ್ ಕುಡಿದ ಬಂದಾನ. ಮನೇಲಿ ನಿಂಗ್ಯಾ ಇಲ್ಲ. ನನ್ನಲ್ಲಿ ಅದೆಂಥ ಕೆಲಸ ಅಂತ ಯೋಚನೆಗೆ ಬಿದ್ದಳು.

‘ಯಾವುದೋ ಕೆಲಸದ ಸಂಬಂಧ ಧಣೇರು ಊರಿಗೆ ಬಂದಾರ. ಅದ್ಕ ಶಾರದಮ್ಮಕ್ಕ ನೀ ಹೂ ಅಂದ್ರ ನಿನಗೂ ಸುಖ, ಧಣೇರಿಗೂ ಸುಖ. ಹಂಗೆ ಕೈತುಂಬಾ ರೊಕ್ಕನೂ ಕೊಡ್ತಾರಂತ, ಯೋಚ್ನೆ ಮಾಡಂಗೆ’ ಅಂದ. ಸರಕ್ಕನೆ ಒಳಗೆ ಹೋದವಳು ಕತ್ತಲಲ್ಲೂ ಕಣ್ಣು ಹೊಂದಿಸಿಕಂಡು ಅಡಿಗೆಮನೇಲಿ ಇಟ್ಟಿದ್ದ ಈಳಿಗೆಮಣೆ ತಂದು, ‘ಲೋ ಬಾಡಕಾವ್ ಬಸ್ಯಾ, ಬಾಯಿ ತುಂಬಾ ಅಕ್ಕ ಅಂತಿ, ಇಂಥ ಹೇಸಿಗೆ ತಿಂಬಾ ಕೆಲಸಕ್ಕೆ ಕರಿತೀದ್ದಿ. ನಿನಗೇನಾದ್ರು ನಾಚಿಕೆ ಮಾನ ಮರ್ಯದೆ ಇದ್ದರೆ ಇಲ್ಲಿಂದ ಜಾಗ ಖಾಲಿ ಮಾಡು. ಇಲ್ಲಾಂದ್ರ ನಿನಗಾ ಅದರ ಜೊತೆ ಹಂಗೆ ನಿನ್ನ ಧಣೇರಿಗೂ ಸೇರಿಸಿ ಇದೇ ಈಳಿಗೆಲಿ ಕುತ್ತಿಗೆ ಕೊಯ್ದು ಅಗಸಿ ಬಾಗಿಲಿಗಿ ತೋರಣ ಕಟ್ಟತಿನಿ’ ಅಂತ ಅದೆಲ್ಲಿತ್ತೋ ಸಿಟ್ಟು, ಜೊತೆಗೆ ಅಷ್ಟು ಧೈರ್ಯ ಒಂದೇ ಉಸಿರಿಗೆ ಒದರಿದಾಗ, ಹೇಳದೆ ಕೇಳದೆ ಅಲ್ಲಿಂದ ಜಾಗ ಖಾಲಿ ಮಾಡಿದ್ದ.

ಇಷ್ಟು ಹೇಳಿ ಶಾರದಮ್ಮ ಕಣ್ಣಲ್ಲಿ ದಳದಳನೆ ಕಣ್ಣೀರು ಉದುರಿಸುತ್ತಾ ಮುಗಿಸಿದಳು. ‘ಕಲಿಗಾಲ ಬಂದು ಎಲ್ಲಾ ಕೆಟ್ಟು ಹೋಗ್ಯಾದ. ಇಲ್ಲಿ ಸಂಬಂಧಗಳಿಗಿಂತ ರೊಕ್ಕನ ಇಪ್ರಿಗೆ ದೊಡ್ಡದಾಗಿ ಕಾಣ್ತಾದ. ರೊಕ್ಕ ಕೊಡ್ತಾರಂದ್ರ ಇವರು ಹಡೆದ ತಾಯಿನೂ ಮಾರೋ ಮಕ್ಕಳು ಹುಟ್ಟ್ಯಾರಾ, ಸಮಾಧಾನ ಮಾಡಿಕ್ಯಾ’ ಅಂತ ತಂದ ಚಹನ ಶಾರದಮ್ಮಗ ಅರ್ಧ ಹಾಕಿ ತಾನು ಅರ್ಧ ಹಾಕಿಕಂಡು ನೀಲಮ್ಮ ಕುಡಿದಳು.

ಇನ್ನೇನು ನೀಲಮ್ಮ ಹೋಗುವುದಕ್ಕೆ ರೆಡಿಯಾದಳು. ರೋಡಿನ ಮ್ಯಾಲೆ ಬಸವ ಹೋಗುತ್ತಿದ್ದ. ‘ಹೇ ಬಸವ, ಬಾ ಇಲ್ಲಿ’ ಎಂದು ಕೂಗಿ ಕರೆದಳು ನೀಲಮ್ಮ. ರಾತ್ರಿ ಕುಡಿದ ನಶೆಗೆ ತಲೆ ಚಿಟ್ ಅಂದು ಮಬ್ಬು ಕವಿದಿದ್ದ ಬಸವನಿಗೆ ನೀಲಮ್ಮಳ ದನಿಗೆ ಬೆಚ್ಚಿಬಿದ್ದು ಹುಳ್ಳಗೆ ಮುಖಮಾಡಿಕಂಡು ಬಂದು ಹೊರಗ ನಿಂತ.

‘ಒಳಗ ಬಾ ಬಸವ. ಹಂಗ್ಯಾಕ ಅಲ್ಲೇ ಗರಡಗಂಬ ನಿಂತಾಂಗ ಹೊರಗ ನಿಂತಿದ್ದಿ’ ಅಂದಳು ನೀಲಮ್ಮ.

ಹೊಸ್ತಿಲ ಒಳಗೆ ಬಂದು ಕುಂತ ಬಸವ ಕಣ್ಣಿಗೆ ಕಣ್ಣು ಕೊಟ್ಟು ಮಾತಾಡದೆ ತಲೆಬಗ್ಗಿಸಿಕಂಡು ಕುಳಿತ. ‘ನೀ ನಿನ್ನೆ ನಮ್ಮ ಶಾರದಮ್ಮಕ್ಕಗ ಹಂಗ ಮಾತಾಡಿದ್ದು ನನಗೆ ಬಾಳಾ ಕೆಟ್ಟ ಅನಿಸ್ತು ನೋಡು ಬಸವ’ ಅಂದಳು ನೀಲಮ್ಮ.

‘ನೀಲಮ್ಮಕ್ಕ ನೀ ಏನ್ ಹೇಳಕತಿದಿ ನನಗಾ ಒಂದು ಗೊತ್ತಾಗವಲ್ದು, ಸ್ವಲ್ಪ ಬಿಡಿಸಿ ಹೇಳು’ ಎಂದು ಮನೆಯ ಮಾಡ ದಿಟ್ಟಿಸಿದ. ‘ಸರಿ ರಾತ್ರ್ಯಾಗ ಬಂದು ಧಣೇರ ಬತ್ತೆಕಾ ಮಕ್ಕಾಕ ಬಾ ಅಂತ ನಮ್ಮ ಶಾರದಮ್ಮಗ ಅಂದಿಯಂತಲ್ಲಾ, ಹೊಟ್ಟೆಗೇನ್ ತಿಂತಿ’ ಅಂದಳು. ಶಾರದಮ್ಮ ಮುಖ ದಪ್ಪ ಮಾಡಿಕಂಡು ಗ್ವಾಡಿಗೆ ಬೆನ್ನು ಮಾಡಿಕಂಡು ಸಿಟ್ಟಿನಿಂದ ಬಸವನ ನೋಡುತ್ತಾ ಕುಳಿತಿದ್ದಳು.

‘ಹೇ ನೀಲಮ್ಮಕ್ಕ, ಏನ್ ಮಾತ್ ಅಂತ ಆಡ್ತಿ. ನಾ ನಿನ್ನೆ ರಾತ್ರಿ ಸ್ವಲ್ಪ ಜಾಸ್ತಿ ಕುಡಿದಿದ್ದೆ ನಿಜ. ಆದ್ರೆ ನೀವು ಹೇಳಂತ ಕೆಲಸ ನಾನೇನ್ ಮಾಡಿಲ್ಲ. ನಿನ್ನೆ ರಾತ್ರಿ ಬ್ಯಾರೆ ಕರೆಂಟ್ ಇದ್ದಿಲ್ಲ. ಯಾರನ್ನೋ ಅನ್ನಕಂಡು ನನಗ ಅನಕತ್ತಿರಿ’ ಅಂತ ಎದ್ದು ನಿಂತ.

‘ಜಾಸ್ತಿ ಕುಡಿದಿದ್ದಿ ನೀನು, ನಿನ್ನೆ ರಾತ್ರಿ ಮನಿಗೆ ಬಂದಿದ್ದು ನೀನು ಹೆಂಗ ಮಳ್ಳ ಮಾಡದಂಗ ಮಾಡಕತಿ ನೋಡು. ಜಾಸ್ತಿ ಕುಡಿದ್ರ ಶಾರದಮ್ಮನ ಮನಿ ಹೆಂಗ ನೆನಪು ಬಂತು. ನಿನ್ನ ಹೆಂಡತಿ ಇದ್ದಳಲ್ಲ, ಆ ಮಿಂಡಲಾಡಿನ ಮಲಗಸಬೇಕಿತ್ತು ಬೋಸಡಿ ಮಗನೆ, ಗಂಡ ಇಲ್ಲದ ಹೆಣಮಕ್ಕಳಂದ್ರ ಅಷ್ಟು ಹಗುರಾ ಅಂದುಕಂಡಿದೇನು?’ ಅಂತ ನೀಲಮ್ಮ ತಾರಾಮಾರಿ ಬೈಯುತ್ತಿದ್ದರೆ ಬಸವ ಗಾಬರಿಬಿದ್ದ. ಮೆಲ್ಲಗೆ ಸಾವರಿಸಿಕೊಂಡು, ‘ನೀಲಮ್ಮಕ್ಕ ನಿನ್ನ ಕೈ ಮುಗಿತೀನಿ. ತಪ್ಪಾಯ್ತು ನಂದು. ಏನೋ ಕುಡಿದ ನಶೇಲಿ ಮಾಡಬಾರದಿತ್ತು ಮಾಡಿಬಿಟ್ಟೆ. ಶಾರದಮ್ಮಕ್ಕ, ನಿನ್ನ ಕಾಲು ಮುಗಿತೀನಿ. ಯಾರಿಗೂ ಹೇಳಬ್ಯಾಡ್ರಿ. ನನ್ನ ಮಾನ ಮಾರ್ಯದೆ ಹೋಗುತ್ತೆ. ಇನ್ನೊಂದು ಸಲ ಹಿಂಗ ಮಾಡಲ್ಲಕ್ಕಾ, ಬೇಕಾರ ನಡುಮನ್ಯಾಗ ಬರ್ತಿನಿ ಒಂದೆರಟು ಒದ್ದು ಬಿಡ್ರಿ’ ಅಂತ ಕಣ್ಣೀರು ಹಾಕುತ್ತಾ ಗೋಗರೆಯತೊಡಗಿದ.

ಶಾರದಮ್ಮ ನೀಲಮ್ಮ ಇಬ್ಬರೂ ಒಮ್ಮೆ ಮುಖಮುಖ ನೋಡಿಕಂಡರು. ಇಬ್ಬರ ಮುಖದಲ್ಲಿ ಈ ಮೊದಲು ಇದ್ದ ನೋವಿನ ಬದಲಾಗಿ ಮುಖದಲ್ಲಿ ಗೆಲುವಿನ ಕಳೆ ಮೂಡಿತ್ತು. ಇಬ್ಬರು ಏನೂ ಮಾತನಾಡದೆ ಬಸವನ ಮುಖ ನೋಡಿ ಎದ್ದು ನಡೀ ಇಲ್ಲಿಂದ ಅನ್ನುವಂಗ ಕಣ್ಣಲ್ಲೇ

